**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ದೊಡ್ಡಬಳ್ಳಾಪುರ**

**ಸಿಸಿ .160 /2019**

**ಡಿ.ಡಬ್ಲ್-1**

| | |
|---|---|
| **ಹೆಸರು** | ವೆಂಕಟಚಲಾ |
| **ತಂದೆಯ ಹೆಸರು** | ಲೇಟ್ ದೊಡ್ಡರಾಮಶೆಟ್ಟಿ |
| **ವಯಸ್ಸು** | ಸುಮಾರು 58 ವರ್ಷ |
| **ಉದ್ಯೋಗ** | ಆಟೋ ಚಾಲಕ |
| **ವಾಸ ಸ್ಥಳ** | ರಾಜಘಟ್ಟ |

**ದಿನಾಂಕಃ 05.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ**

2014 ರಿಂದ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ದಿ.15.06.2015 ರಂದು ವೆಂಕಟಸ್ವಾಮಿ ಎಂಬುವವರ ಹತ್ತಿರ ರೂ. 5 ಲಕ್ಷದ ಮೊತ್ತದ ಚೀಟಿ ಹಣವನ್ನು ಹಾಕಿರುತ್ತೇನೆ. ಸದರಿ ಚೀಟಿ ಸುಮಾರು 40 ಜನರು ಇರುತ್ತಾರೆ. ನನ್ನ ಜೊತೆ ಶಿವುಕುಮಾರ ಮತ್ತು ನಾರಾಯಣಸ್ವಾಮಿರವರೂ ಸಹ ಚೀಟಿಗೆ ಹಣವನ್ನು ಹಾಕಿರುತ್ತಾರೆ. ಪ್ರತಿ ತಿಂಗಳು ರೂ.12,500/- ಗಳ ಮೊತ್ತವನ್ನು ಪಾವತಿ ಮಾಡುತ್ತಿದ್ದು, 6 ತಿಂಗಳ ನಂತರ ಚೀಟಿಯನ್ನು ತೆಗೆದುಕೊಂಡಿರುತ್ತೇನೆ, ಹಾಗೂ ಅದರ ಭದ್ರತೆಗೆಂದು 2 ಖಾಲಿ ಸಹಿ ಮಾಡಿದ ಸಿಂಡಿಕೇಟ್ ಬ್ಯಾಂಕ್ ಗೆ ಸೇರಿದ ಚೆಕ್ಕುಗಳನ್ನು ಹಾಗೂ ನನ್ನ ಚೆಕ್ಕ ಪುಸ್ತಕವನ್ನ ವೆಂಕಟಸ್ವಾಮಿ ರವರಿಗೆ ನೀಡಿರುತ್ತೇನೆ.

ಅದನ್ನು ನನಗೆ ಹಿಂದಿರುಗಿ ನೀಡಿರುವುದಿಲ್ಲ, ಆದರೆ ನಾನು ಚೀಟಿಹಣವನ್ನು ಮರು ಪಾವತಿ ಮಾಡಿರುತ್ತೇನೆ. ಪಿರ್ಯಾದಿದಾರರಿಗೆ ಮತ್ತು ನನ್ನ ಮದ್ಯೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ, ಹಾಗೂ ಇದಕ್ಕೂ ಮೊದಲು ಅವರ ಪರಿಚಯವೂ ಸಹ ಇರುವುದಿಲ್ಲ. ನನಗೆ ಪ್ರಕರಣದ ನೋಟಿಸ್ ಬಂದ ನಂತರ ನ್ಯಾಯಾಲಯದಲ್ಲಿಯೆ ಅವರನ್ನು ಮೊದಲನೇಯ ಬಾರಿ ನೋಡಿರುತ್ತೇನೆ. ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು, ನನ್ನನ್ನು ನಿರಪರಾಧಿ ಎಂದ ಘೋಷಿಸಬೇಕೆಂದು ಪ್ರಾಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ವಕೀಲರ ಕೋರಿಕೆಯ ಮೇರೆಗ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ .**